**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**-483/2022 **PW**-1

**ದಿಃ 14.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಡಿ ಡಿ ಡಬ್ಲು ವಕೀಲರಿಂದಃ**

1. ದಾವಾ ಆಸ್ತಿಯು ಮೂಲತಃ ಯಾರಿಗೆ ಸೇರಿದ್ದು ಎಂದರೆ ಸಾಕ್ಷಿಯು ನಮ್ಮ ಅತ್ತೆಯ ಆಸ್ತಿ ಎನ್ನುತ್ತಾರೆ. ಅಂದರೆ ಅವರ ಗಂಡ ಬೀಮಪ್ಪ ಕೃಷ್ಣಪ್ಪ ಹೊಸಮನಿ ರವರ ಆಸ್ತಿ ಎಂದರೆ ಸರಿ. ಬೀಮಪ್ಪನಿಗೆ ಕೃಷ್ಣಪ್ಪ ಎಂಬ ಮಗ ಇದ್ದ ಎಂದರೆ ಸರಿ. ರಿಂದವ್ವ ತಮ್ಮ ಅತ್ತೆ ಎಂದರೆ ಸರಿ. ಇವರಿಗೆ ತಂಗೆವ್ವ ಎಂಬ ಮಗಳು ಇದ್ದಳೆಂದರೆ ಸರಿ. ಬೀಮಪ್ಪನಿಗೆ ಒಬ್ಬ ಗಂಡು ಮಗ ಮತ್ತು ಐದು ಜನ ಹೆಣ್ಣು ಮಕ್ಕಳಿದ್ದರು ಎಂದರೆ ಸರಿ. ಅವರೆಂದರೆ ಕೃಷ್ಣಪ್ಪ , ರಿಂದವ್ವ , ತಂಗೆವ್ವ , ಸಾವಮ್ಮ , ಬಸವ್ವ ಮತ್ತು ಮಲ್ಲವ್ವ ಎಂದರೆ ಸರಿ.

2. ದಾವಾ ಆಸ್ತಿಯು ಮೊದಲಿಗೆ ಒಟ್ಟು 23 ಎಕರೆ 29 ಗುಂಟೆ ಇತ್ತು ಎಂದರೆ ಸರಿ. ಆಸ್ತಿ ಯಾವ ರೀತಿ ಬಂತು ಎಂದರೆ ಸಾಕ್ಷಿಯು ಕೃಷ್ಣಪ್ಪನಿಗೆ ಮಕ್ಕಳು ಇರದ ಕಾರಣ ನನ್ನ ಗಂಡನನ್ನು ದತ್ತಕಕ್ಕೆ ತೆಗೆದುಕೊಂಡಿದ್ದರೆಂದು ನುಡಿಯುತ್ತಾರೆ. ನನ್ನ ಮದುವೆಯಾಗುವ ಪೂರ್ವದಲ್ಲಿ ನನ್ನ ಗಂಡನನ್ನು ಬೀಮಪ್ಪ ಕೃಷ್ಣಪ್ಪ ಹೊಸಮನಿ ರವರನ್ನು ದತ್ತಕಕ್ಕೆ ತೆಗೆದುಕೊಂಡಿರುತ್ತಾರೆ.

3. ಬೀಮಪ್ಪನ ಮೇಲೆ ಅವರ ಸೊಸೆ ಕೇಸನ್ನು ಹಾಕಿದ್ದರು ಎಂದರೆ ಸಾಕ್ಷಿಯು ನಾನು ಮದುವೆಯಾಗುವ ಪೂರ್ವದಲ್ಲಿ ಹಾಕಿರಬಹುದು ಆ ವಿಚಾರ ಎಲ್ಲವೂ ನನಗೆ ಗೊತ್ತಿಲ್ಲ ಎನ್ನುತ್ತಾರೆ. ತಮ್ಮ ಗಂಡನಿಗೆ 18 ಎಕರೆ 29 ಗುಂಟೆ ಯಾವ ರೀತಿ ಬಂತು ಎಂದರೆ ಸಾಕ್ಷಿಯು ಅವರ ತಾಯಿ ತುಳಸಮ್ಮ ಹಚ್ಚಿರುತ್ತಾರೆಂದು ನುಡಿಯುತ್ತಾರೆ. ಮೊದಲಿಗೆ ಸರ್ವೆ ನಂಃ133/1 ರಲ್ಲಿ 18 ಎಕರೆ 29 ಗುಂಟೆ ಹಾಗೂ 133/2 ರಲ್ಲಿ 5 ಎಕರೆ ಇತ್ತು ಎಂದರೆ ಸರಿ. ಬೀಮಪ್ಪನ ಸೊಸೆಯಾದ ಸಾವಂತ್ರವ್ವ ರವರು ಕೇಸು ಹಾಕಿದ ಕಾರಣ ಆಕೆಗೆ 5 ಎಕರೆ ಆಸ್ತಿ ಬಂದಿತ್ತು ಎಂದರೆ ಸರಿ. 18 ಎಕರೆ 29 ಗುಂಟೆ ಆಸ್ತಿಯು ಉಳಿದ ಮಕ್ಕಳಿಗೆ ಬಂದಿತ್ತು ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಆಸ್ತಿ ಯಾವ ರೀತಿ ಬಂತು ಎಂದು ತೋರಿಸಲು ದಾಖಲೆಯನ್ನು ಕೊಟ್ಟಿರುತ್ತೇನೆ. ತಮ್ಮ ಗಂಡನಿಗೆ ದತ್ತಕದಿಂದ ಆಸ್ತಿ ಬಂದಿರುತ್ತದೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

4. 18 ಎಕರೆ 29 ಗುಂಟೆಯು ಮೃತ್ಯು ಪತ್ರದ ಪ್ರಕಾರ ಬಂದಿರುತ್ತದೆಂದು ಹೇಳಿ 08.07.1978 ರಲ್ಲಿ ತಮ್ಮ ಗಂಡ ದಾಖಲಿಸಿಕೊಂಡಿರುತ್ತಾರೆಂದರೆ ಸಾಕ್ಷಿಯು ಈ ವಿಚಾರ ಗೊತ್ತಿಲ್ಲ ಎನ್ನುತ್ತಾರೆ. ದಿಃ13.01.1980 ರಲ್ಲಿ ಬೀಮಪ್ಪನ ಹೆಣ್ಣು ಮಕ್ಕಳು ಸದರಿ ಮುಟೇಶನ್ನ ತಪ್ಪು ಇರುತ್ತದೆಂದು ಹೇಳಿ ಎಲ್ಲರ ಹೆಸರನ್ನು ದಾಖಲಿಸಿಕೊಂಡಿರುತ್ತಾರೆಂದರೆ ಸಾಕ್ಷಿಯು ನ್ಯಾಯಾಲಯದ ಆದೇಶದಂತೆ ಆಗಿರುತ್ತದೆಂದು ನುಡಿಯುತ್ತಾರೆ. ಕಾನೂನುಬಾಹೀರವಾಗಿ ತಮ್ಮ ಗಂಡನ ಹೆಸರು ದಾಖಲಾಗಿದೆ ಎಂದರೆ ಸರಿಯಲ್ಲ. ಬೀಮಪ್ಪನ ಹೆಣ್ಣು ಮಕ್ಕಳಿಗೂ ಹಕ್ಕು ಇರುವ ಕಾರಣ ತಮಗೆ ಈ ದಾವೆಯನ್ನು ಮುಂದುವರೆಸುವ ಹಕ್ಕು ಇರುವದಿಲ್ಲ ಎಂದರೆ ಸರಿಯಲ್ಲ.

5. ಗ್ರಾಮದಲ್ಲಿ 8 ಮನೆಗಳು ಇರುತ್ತವೆಂದರೆ ಸರಿ. ಅದರಲ್ಲಿ ಐದು ಮನೆಗಳು ಬಾಡಿಗೆಗೆ ನೀಡಲಾಗಿರುತ್ತದೆ. ಹಳೇಹುಬ್ಬಳ್ಳಿಯಲ್ಲಿ ಒಂದು ಆಸ್ತಿಯನ್ನು ಬಾಡಿಗೆಗೆ ನೀಡಲಾಗಿದೆ ಎಂದರೆ ಗೊತ್ತಿಲ್ಲ. 5 ಮನೆ ಬಾಡಿಗೆ ಮತ್ತು ಹಳೇಹುಬ್ಬಳ್ಳಿಯ ಆಸ್ತಿ ಬಾಡಿಗೆ ಸುಮಾರಾ 12 ಸಾವಿರ ರೂ ಗಳನ್ನು ತಾವೇ ತೆಗೆದುಕೊಳ್ಳುತ್ತಿದ್ದೀರಿ ಎಂದರೆ ಸರಿ. ಸಾಕ್ಷಿಯು ನನ್ನ ಜೀವನ ಸಾಗಿಸಲು ಹಾಗೂ ನನ್ನ ಖರ್ಚುಗಳ್ನು ನೀಗಿಸಿಕೊಳ್ಳಲು ತೆಗೆದುಕೊಳ್ಳುತ್ತಿದ್ದೇನೆ ಎನ್ನುತ್ತಾರೆ.

(ಮುಂದುವರೆದ ಪಾಟೀ ಸವಾಲಗೆ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.)

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**